ಇ) ನಿಜವಾದ ಅಪರಾಧಿಗಳನ್ನು ಪತ್ತೆ ಹಚ್ಚಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ;

ಈ) ನಿರಪರಾಧಿಗಳ ಬಿಡುಗಡೆಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ?

ಶ್ರೀ ಎಂ.ಪಿ. ಪ್ರಕಾಶ್ (ಒಳಾಡಳಿತ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) :

ಅ) ಮಂಗಳೂರಿನಲ್ಲಿ ನಡೆದ ಕೋಮು ಗಲಭೆ ಬಗ್ಗೆ ಶ್ರೀ ಎಂ.ಕೆ. ಅಗರ್‌ವಾಲ್ ಸಮಿತಿ ತನ್ನ ವರದಿಯನ್ನು ದಿನಾಂಕ : 2-12-2006 ರಂದು ಸರ್ಕಾರಕ್ಕೆ ಸಲ್ಲಿಸಿದೆ.

ಆ) 2006ನೇ ಅಕ್ಟೋಬರ್ ತಿಂಗಳಿನಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಡೆದ ಗಲಭೆಯ ಸಂದರ್ಭದಲ್ಲಿ 02 ಕೊಲೆಗಳು ನಡೆದಿರುತ್ತದೆ. ಸದರಿ 02 ಕೊಲೆ ಪ್ರಕರಣಗಳನ್ನು ಸರ್ಕಾರದ ಆದೇಶ ಸಂಖ್ಯೆ : ಒಇ/113/ಸಿಓಡಿ/06 ದಿನಾಂಕ : 13-10-2006 ರಂತೆ ಸಿ.ಓ.ಡಿ. ಘಟಕಕ್ಕೆ ವರ್ಗಾಯಿಸಲಾಗಿದ್ದು, ಅವು ಸಿ.ಓ.ಡಿ. ತನಿಖೆಯಲ್ಲಿವೆ. ಸಿ.ಓ.ಡಿ ಅಧಿಕಾರಿಗಳು ತನಿಖೆಯನ್ನು ಪೂರ್ಣಗೊಳಿಸಿ ನ್ಯಾಯಾಲಯಕ್ಕೆ ದೋಷಾರೋಪಣಾ ಪತ್ರವನ್ನು ಸಲ್ಲಿಸಿರುತ್ತಾರೆ. ಈ ಎರಡು ಪ್ರಕರಣಗಳು ನ್ಯಾಯಾಲಯದಲ್ಲಿ ಎಸ್.ಸಿ. ಸಂಖ್ಯೆ : 09-2007 ಮತ್ತು 12/2007ರಲ್ಲಿ ವಿಚಾರಣೆಯಲ್ಲಿರುತ್ತದೆ.

ಇ) ಪ್ರಕರಣದಲ್ಲಿ ಸೂಕ್ತ ಸಾಕ್ಷಾಧಾರಗಳನ್ನು ಸಂಗ್ರಹಿಸಿ ನಿಜವಾದ ಆರೋಪಿಗಳ ವಿರುದ್ಧ ಮಾತ್ರ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಲಾಗಿದೆ.

ಈ) ಯಾವುದೇ ನಿರಪರಾಧಿಗಳನ್ನು ಬಂಧಿಸಿಲ್ಲವಾದ್ದರಿಂದ ಬಿಡುಗಡೆಗೆ ಕ್ರಮ ಕೈಗೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.

492 (789) ಶ್ರೀ ಖಾದರ್ ಯು.ಟಿ. (ಉಳ್ಳಾಲ) :- ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಳ್ಳಾಲ ವಿಧಾನ ಸಭಾ ಕ್ಷೇತ್ರಕ್ಕೆ ಸೇರಿದ ಬೇಂಗ್ರೆ ಪ್ರದೇಶವು ದ್ವೀಪದಂತಿದ್ದು 10 ಸಾವಿರ ಜನ ಸಂಖ್ಯೆ ಇದ್ದು ಈ ಜಾಗ ಬಂದರು ಇಲಾಖೆಗೆ ಸೇರಿದ ಪ್ರದೇಶವಾಗಿದ್ದು ಬಹುತೇಕ ಜನರಿಗೆ ಹಕ್ಕುಪತ್ರ ನೀಡಿರುವುದು ನಿಜವಲ್ಲವೇ;

ಆ) ಹಾಗಿದ್ದಲ್ಲಿ ಬಾಕಿ ಇರುವವರಿಗೆ ಯಾವಾಗ ಹಕ್ಕು ಪತ್ರ ನೀಡಲಾಗುವುದು;

ಇ) ಈ ಪ್ರದೇಶದಲ್ಲಿ ಪ್ರೌಢಶಾಲೆ ಕಟ್ಟಡವನ್ನು ನಿರ್ಮಿಸಲು ಶಾಸಕರ ಅನುದಾನದಿಂದ ಹಣ ಮಂಜೂರು ಮಾಡಲಾಗಿದ್ದು ಈ ಕಟ್ಟಡ ಜಾಗ ಬಂದರು ಇಲಾಖೆಗೆ ಸೇರಿದ್ದು ಪ್ರೌಢಶಾಲೆಗಾಗಿ ಜಾಗ ಹಸ್ತಾಂತರ ಮಾಡುವಂತೆ ಕಡತವನ್ನು ಬಂದರು ಇಲಾಖೆಗೆ ಕಳುಹಿಸಿದ್ದು ಈ ಜಾಗವನ್ನು ಇನ್ನೂ ವರ್ಗಾಯಿಸದಿರಲು ಕಾರಣವೇನು;

ಈ) ಜಾಗವನ್ನು ಯಾವಾಗ ವರ್ಗಾಯಿಸಲಾಗುವುದು, ಈ ಪ್ರದೇಶದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರವು ಸ್ವಂತ ಕಟ್ಟಡ ಇಲ್ಲದೇ ಮಂಗಳೂರು ಮಹಾನಗರ ಪಾಲಿಕೆಯ ಆರೋಗ್ಯ ಇಲಾಖಾ ವತಿಯಿಂದ ನಡೆಸುತ್ತಿರುವುದು ನಿಜವಲ್ಲವೇ;

ಉ) ಹಾಗಿದ್ದಲ್ಲಿ ಸ್ವಂತ ಕಟ್ಟಡವನ್ನು ಕಟ್ಟಲು ಬಂದರು ಇಲಾಖೆಯಲ್ಲಿ ಜಾಗವನ್ನು ವರ್ಗಾಯಿಸುವಂತೆ ಕಡತವನ್ನು ಬಂದರು ಇಲಾಖೆಗೆ ಮಂಡಿಸಿದ್ದು ಇದುವರೆವಿಗೂ ವರ್ಗವಾಗದಿರಲು ಕಾರಣವೇನು;

ಊ) ಜಾಗವನ್ನು ಯಾವಾಗ ವರ್ಗಾಯಿಸಲಾಗುವುದು?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು):

ಅ) ಉಳ್ಳಾಲ ವಿಧಾನ ಸಭಾ ಕ್ಷೇತ್ರಕ್ಕೆ ಸೇರಿದ ಬೇಂಗ್ರೆ ಪ್ರದೇಶದಲ್ಲಿ ಹಿಂದೆ ಸುಮಾರು 1250 ಜನರಿಗೆ ಸರ್ವೆ ನಂಬರ್‌ಗಳನ್ನು ನಮೂದಿಸದೇ ಹಕ್ಕು ಪತ್ರಗಳನ್ನು ನೀಡಲಾಗಿದೆ.

ಆ) ಬೇಂಗ್ರೆ ಮರಳು ಪ್ರದೇಶವನ್ನು ಬೇಂಗ್ರೆ ಗ್ರಾಮವಾಗಿ 1995ರಲ್ಲಿ ಘೋಷಿಸಲಾಗಿದೆ. ಈ ಪ್ರದೇಶವನ್ನು ಅಳತೆ ಮಾಡಿ ಸರ್ವೆ ನಂಬರ್ ಹಾಗೂ ಪ್ರತಿ ಸರ್ವೆ ನಂಬರ್‌ಗಳಿಗೆ ವಿಸ್ತೀರ್ಣಗಳನ್ನು ನಮೂದಿಸಿ ಕರ್ನಾಟಕ ಭೂ ಕಂದಾಯ ಕಾಯಿದೆಯಂತೆ ಅಧಿಸೂಚನೆ ಹೊರಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಆದರೆ ಈಗ ಲೋಕಸಭೆ ಮತ್ತು ರಾಜ್ಯ ವಿಧಾನ ಸಭಾ ಕ್ಷೇತ್ರಗಳ ಪುನರ್ ವಿಂಗಡಣೆ ಪ್ರಕ್ರಿಯೆ ಮುಗಿಯುವ ವರೆಗೆ ಯಾವುದೇ ಮಾರ್ಪಾಡು ಮಾಡಬಾರದೆಂದು ಚುನಾವಣಾ ಆಯೋಗ ವಿಧಿಸಿರುವ ನಿರ್ಬಂಧವನ್ನು ಅನುಸರಿಸಿ ಸರ್ವೆ ನಂಬರ್ ನೀಡಿ ಅಧಿಸೂಚನೆ ಹೊರಡಿಸುವ ಕಾರ್ಯಕ್ಕೆ ತಡೆ ಬಿದ್ದಿದೆ.

ಆದ್ದರಿಂದ ಸರ್ವೆ ನಂಬರ್ ನೀಡಿ ಅಧಿಸೂಚನೆ ಹೊರಡಿಸಿದ ಬಳಿಕ ಕರಾವಳಿ ನಿಯಂತ್ರಣ ವಲಯದ ನಿಯಮಗಳನ್ನು ಪರಿಶೀಲಿಸಿಕೊಂಡು ಆ ಪ್ರದೇಶದಲ್ಲಿ ನೆಲೆಸಿರುವ ಉಳಿದವರಿಗೆ ನಿಯಮಾನುಸಾರ ಹಕ್ಕು ಪತ್ರಗಳನ್ನು ನೀಡುವ ವಿಚಾರದಲ್ಲಿ ಪ್ರತ್ಯೇಕ ಕ್ರಮಗಳನ್ನು ಜರುಗಿಸಲಾಗುವುದು.

ಇ) ಕರ್ನಾಟಕ ಬಂದರುಗಳ (ಸರಕು ಹೇರಿಳಿಸುವ, ಶುಲ್ಕಗಳು) ನಿಯಮಾವಳಿಗಳ ಷೆಡ್ಯೂಲ್ ಎಫ್‌ರ ಕ್ರಮ ಸಂ.8 ರಂತೆ ಈ ಜಮೀನಿಗೆ ಪ್ರತಿ 10 ಚ.ಮೀ.ಗೆ ಪ್ರತಿ ತಿಂಗಳ ರೂ.25.00 ರಂತೆ ಭೂ ಬಾಡಿಗೆಯನ್ನು ವಿಧಿಸಬೇಕಾಗಿರುತ್ತದೆ. ಶಾಲೆಯ ಉದ್ದೇಶಕ್ಕಾಗಿ ಈ ದರಗಳನ್ನು ವಿಧಿಸುವುದು ಸಮಂಜಸವಲ್ಲವೆಂದು ಕಂಡು ಬರುವುದರಿಂದ ನಾಮಿನಲ್ ಬಾಡಿಗೆ ವಿಧಿಸಿ ಬಂದರು ಭೂಮಿ ನೀಡುವ ಬಗ್ಗೆ ಪರಿಶೀಲಿಸಲಾಗುತ್ತಿದೆ.

ಈ) ಈ ಪ್ರದೇಶದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಜಾಗ ನೀಡುವ ಬಗ್ಗೆ ಯಾವುದೇ ಪ್ರಸ್ತಾವನೆಯು ಸರ್ಕಾರದಲ್ಲಿ ಬಾಕಿ ಇರುವುದಿಲ್ಲ.

ಉ) ಉದ್ಭವಿಸುವುದಿಲ್ಲ.

ಊ) ಉದ್ಭವಿಸುವುದಿಲ್ಲ.

494 (868) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) :– ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪವಿತ್ರ ಟಿ.ನರಸೀಪುರದ ತಿರುಮಕೂಡಲು ಎರಡು ಪುರಾತನ ಸೇತುವೆಗಳು ಶಿಥಿಲಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ಸೇತುವೆಗಳ ದುರಸ್ತಿಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಇ) ಹೊಸ ಸೇತುವೆಯನ್ನು ನಿರ್ಮಾಣ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಈ) ರಾಜ್ಯದಲ್ಲಿರುವ ಒಟ್ಟು ಸೇತುವೆಗಳೆಷ್ಟು;

ಉ) ದುರಸ್ತಿಗೊಳಗಾಗಿರುವ ಸೇತುವೆಗಳೆಷ್ಟು (ವಿವರ ನೀಡುವುದು)?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು):

ಅ) ಬಂದಿದೆ.

ಆ) ರಾಷ್ಟ್ರೀಯ ಹೆದ್ದಾರಿ – 212 ರಲ್ಲಿ ಕಬಿನಿ ನದಿಗೆ ಅಡ್ಡಲಾಗಿ ಇರುವ ಹಳೆಯದಾದ ಸೇತುವೆಯನ್ನು ವಾಹನಗಳ ಸಂಚಾರಕ್ಕೆ ಯಾವುದೇ ವ್ಯತ್ಯಯವಾಗದಂತೆ ವಾರ್ಷಿಕ